ಅನಂತಪಥ

ANANTHKUMAR PRATISHTHANA

ಪುಟ 5
ಅನಂತ ಪ್ರೇರಣೆ
ಒಂದು ಯುಗ, ಒಂದು ದೃಷ್ಟಿ, ಒಂದು ಪ್ರೇರಣೆ

ನಾನು ಕಂಡಂತೆ
ಅನಂತಕುಮಾರ್

ಸಂಪುಟ - 6 ಮೇ - 2026 ಸಂಚಿಕೆ - 71

# ಅನಂತ ಸಂಸ್ಕೃತಿ ಮತ್ತು ಪರಂಪರೆ



ಪ್ರತಿ ವರ್ಷ ಏಪ್ರಿಲ್ 18 ರಂದು ಜಗತ್ತಿನಾದ್ಯಂತ 'ವಿಶ್ವ ಪಾರಂಪರಿಕ ದಿನ'ವನ್ನು (World Heritage Day) ಅತ್ಯಂತ ಹೆಮ್ಮೆಯಿಂದ ಆಚರಿಸಲಾಗುತ್ತದೆ. ಪರಂಪರೆ ಎಂದರೆ ಕೇವಲ ಕಲ್ಲು-ಮಣ್ಣುಗಳಿಂದ ನಿರ್ಮಿಸಿದ ಸುಂದರ ಕಟ್ಟಡಗಳಷ್ಟೇ ಅಲ್ಲ; ಆ ಭವ್ಯ ಸ್ಮಾರಕಗಳ ಹಿಂದೆ ಅಡಗಿರುವ ನಮ್ಮ ಪೂರ್ವಜರ ಚಿಂತನೆ ಹಾಗೂ ಇತಿಹಾಸದ ಆಳವಾದ 'ಜ್ಞಾನ ಪರಂಪರೆ'ಯೂ ಹೌದು. 'ಭಾರತೀಯ ಜ್ಞಾನ ಪರಂಪರೆ'ಯು (Indian Knowledge Systems) ಜಗತ್ತಿನ ಅತ್ಯಂತ ಪುರಾತನ, ವೈಜ್ಞಾನಿಕ ಮತ್ತು ಶ್ರೀಮಂತ ಜ್ಞಾನನಿಧಿಯಾಗಿದೆ. ಆದರೆ, ಕಾಲಕ್ರಮೇಣ ನಮ್ಮ ಅನೇಕ ಅಮೂಲ್ಯ ತಾಳೆಗರಿಗಳು, ಹಸ್ತಪ್ರತಿಗಳು ಹಾಗೂ ಐತಿಹಾಸಿಕ ದಾಖಲೆಗಳು ದಶಕಗಳ ಕಾಲ ನಿರ್ಲಕ್ಷ್ಯಕ್ಕೊಳಗಾದವು. ಹಲವು ವಿದೇಶಿ ಆಕ್ರಮಣಕಾರರ ಪಾಲಾಗಿ ಜಗತ್ತಿನ ಬೇರೆ ಬೇರೆ ಮೂಲೆಗಳ ಮ್ಯೂಸಿಯಂಗಳನ್ನು ಸೇರಿಕೊಂಡವು. ಇದೀಗ, ಈ ಅಗಾಧವಾದ ಜ್ಞಾನ ಪರಂಪರೆಯನ್ನು ವ್ಯವಸ್ಥಿತವಾಗಿ ರಕ್ಷಿಸಿ, ಜಾಗತಿಕ ಮಟ್ಟದಲ್ಲಿ ಅದಕ್ಕೆ ಮರುಜೀವ ಹಾಗೂ ಮರುಗೌರವ ತಂದುಕೊಡುವ ನಿಟ್ಟಿನಲ್ಲಿ ಭಾರತವು ಅತ್ಯಂತ ಭರವಸೆಯ ಹೊಸ ಹೆಜ್ಜೆಗಳನ್ನಿಡುತ್ತಿದೆ.





ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಜಾಗತಿಕ ಮಟ್ಟದಲ್ಲಿ ಮರುಸ್ಥಾಪಿಸುವ ಮಹತ್ಕಾರ್ಯಕ್ಕೆ ಇತ್ತೀಚೆಗಷ್ಟೇ ಮತ್ತೊಂದು ಐತಿಹಾಸಿಕ ಯಶಸ್ಸು ಲಭಿಸಿದೆ. 11ನೇ ಶತಮಾನದ ಚೋಳರ ಮಹಾನ್ ರಾಜವಂಶಕ್ಕೆ ಸೇರಿದ ಅತ್ಯಮೂಲ್ಯ ತಾಮ್ರದ ಶಾಸನಗಳನ್ನು (ಲೈಡನ್ ಪ್ಲೇಟ್ಸ್ - Leiden Plates) ನೆದರ್‌ಲ್ಯಾಂಡ್ಸ್ ಸರ್ಕಾರವು ಭಾರತಕ್ಕೆ ಗೌರವಪೂರ್ವಕವಾಗಿ ಹಸ್ತಾಂತರಿಸಿದೆ. ಮಹಾನ್ ಸಾಮ್ರಾಟರಾದ ರಾಜರಾಜ ಚೋಳ ಮತ್ತು ರಾಜೇಂದ್ರ ಚೋಳರ ಕಾಲದ ತಮಿಳು ಹಾಗೂ ಸಂಸ್ಕೃತ ಭಾಷೆಯ ಬರಹಗಳಿರುವ, ಸುಮಾರು 30 ಕೆಜಿ ತೂಕದ ಈ 21 ಬೃಹತ್ ತಾಮ್ರದ ಫಲಕಗಳು ಭಾರತದ ಶ್ರೇಷ್ಠ ಇತಿಹಾಸ, ಅಂದಿನ ಅತ್ಯಾಧುನಿಕ ಆಡಳಿತ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಗೆ ಜೀವಂತ ಸಾಕ್ಷಿಯಾಗಿವೆ. ದಶಕಗಳ ಕಾಲ ನೆದರ್‌ಲ್ಯಾಂಡ್ಸ್‌ನ ಲೈಡನ್ ವಿಶ್ವವಿದ್ಯಾಲಯದಲ್ಲಿದ್ದ ಈ ಅಪೂರ್ವ ಜ್ಞಾನನಿಧಿಯನ್ನು ತಾಯ್ನಾಡಿಗೆ ಮರಳಿ ತರುವಲ್ಲಿ ಭಾರತ ಯಶಸ್ವಿಯಾಗಿರುವುದು ಇಡೀ ದೇಶವೇ ಹೆಮ್ಮೆಪಡುವ ವಿಚಾರ. ಇವು ಕೇವಲ ಲೋಹದ ತುಂಡುಗಳಲ್ಲ; ಬದಲಾಗಿ, ನಮ್ಮ ಭವ್ಯ ಇತಿಹಾಸವನ್ನು ಮತ್ತೆ ಜೀವಂತಗೊಳಿಸುವ ಪ್ರಮುಖ ಕೊಂಡಿಗಳು.



ಈ ಐತಿಹಾಸಿಕ ಘಟನೆಯು ಹೆಮ್ಮೆಯ ಕನ್ನಡಿಗರಾದ ಶ್ರೀ ಅನಂತಕುಮಾರ್ ಅವರು ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವರಾಗಿದ್ದಾಗ ಕಂಡ ಮಹೋನ್ನತ ಕನಸಿನ ನೇರ ಮುಂದುವರಿಕೆಯಾಗಿದೆ. 2003ರಲ್ಲಿ ತಮ್ಮ ನೇರ ಉಸ್ತುವಾರಿಯಲ್ಲಿ ಅವರು 'ರಾಷ್ಟ್ರೀಯ ಹಸ್ತಪ್ರತಿ ಮಿಷನ್' (National Mission for Manuscripts - NMM) ಅನ್ನು ದೇಶದಲ್ಲಿ ಮೊದಲ ಬಾರಿಗೆ ಆರಂಭಿಸಿದ್ದರು. ಭಾರತದ ಯಾವುದೇ ಜ್ಞಾನ ಸಂಪತ್ತು ಧೂಳು ಹಿಡಿಯಬಾರದು ಹಾಗೂ ವಿದೇಶದಲ್ಲಿರುವ ನಮ್ಮ ಪರಂಪರೆಯ ಪ್ರತಿಯೊಂದು ಕುರುಹು ಮರಳಿ ಭಾರತದ ಮಣ್ಣನ್ನು ಸೇರಬೇಕು ಎಂಬುದು ಅವರ ದೃಢ ಆಶಯವಾಗಿತ್ತು.ನಾಡಿನಾದ್ಯಂತ ಹಳ್ಳಿ-ಹಳ್ಳಿಗಳಲ್ಲಿ, ಮಠ-ಮಾನ್ಯಗಳಲ್ಲಿ ಹರಿದುಹಂಚಿಹೋಗಿದ್ದ ಕೋಟಿಗಟ್ಟಲೆ ತಾಳೆಗರಿ ಹಾಗೂ ಹಸ್ತಪ್ರತಿಗಳನ್ನು ಕಲೆಹಾಕಿ, ಅವುಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ, ಡಿಜಿಟಲೀಕರಣಗೊಳಿಸುವ ಮೂಲಕ ಮುಂದಿನ ಪೀಳಿಗೆಗೆ ತಲುಪಿಸುವ ಗಟ್ಟಿ ಅಡಿಪಾಯ ಹಾಕಿದ ಕೀರ್ತಿ ಅನಂತಕುಮಾರರಿಗೆ ಸಲ್ಲುತ್ತದೆ. ಆಯುರ್ವೇದ, ಖಗೋಳಶಾಸ್ತ್ರ, ಗಣಿತ, ಕೃಷಿ ಪದ್ಧತಿ ಮತ್ತು ಅಧ್ಯಾತ್ಮದಂತಹ ಅಕ್ಷಯ ಜ್ಞಾನನಿಧಿಯನ್ನು ಉಳಿಸುವಲ್ಲಿ ಅವರು ತೋರಿದ ಸಾಂಸ್ಕೃತಿಕ ನಾಯಕತ್ವ ಭಾರತದ ಇತಿಹಾಸದಲ್ಲಿ ಸದಾ ಸ್ಮರಣೀಯ ಹಾಗೂ ಪ್ರೇರಣಾದಾಯಕವಾಗಿದೆ.

ದೇಶದ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಪ್ರಚಾರ ಕಾರ್ಯವನ್ನು ಸಾಂಸ್ಕೃತಿಕ ಸಚಿವರಾಗಿದ್ದ ಅನಂತಕುಮಾರ್ ಅವರು ಅತ್ಯಂತ ಉನ್ನತ ಮಟ್ಟಕ್ಕೆ ಕೊಂಡೊಯ್ದರು.



ಇತಿಹಾಸದ ಗರ್ಭದಲ್ಲಿ ಹುದುಗಿದ್ದ ಭಾರತದ ಸಾಂಸ್ಕೃತಿಕ ಅಸ್ಮಿತೆಯನ್ನು ಜಗತ್ತಿಗೆ ಸಾರಲು, ವಿಶ್ವದ ಬರೋಬ್ಬರಿ 76 ದೇಶಗಳೊಂದಿಗೆ ಸಾಂಸ್ಕೃತಿಕ ಒಪ್ಪಂದ ಮಾಡಿಕೊಳ್ಳುವ ವಿನೂತನ ಹೆಜ್ಜೆಯಿಟ್ಟ ದೇಶದ ಮೊದಲ ನಾಯಕ ಅವರು.ಈ ಮಹತ್ತರ ರಾಜತಾಂತ್ರಿಕ ಪ್ರಯತ್ನದ ಫಲವಾಗಿ, ಇತಿಹಾಸದಲ್ಲೇ ಪ್ರಥಮ ಬಾರಿಗೆ ಕಾಂಬೋಡಿಯಾ ಹಾಗೂ ಕ್ರೊಯೇಷಿಯಾ ದೇಶಗಳೊಂದಿಗೆ ಭಾರತವು ಸಾಂಸ್ಕೃತಿಕ ಸಹಕಾರ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ಹಮ್ಮಿಕೊಂಡಿತು. ಇದೇ ದೂರದೃಷ್ಟಿಯ ಭಾಗವಾಗಿ, ಭಾರತದ ಸಾಂಸ್ಕೃತಿಕ ಆಸ್ತಿಗಳೆನಿಸಿದ ರವೀಂದ್ರನಾಥ್ ಟ್ಯಾಗೋರ್, ನಂದಲಾಲ್ ಬೋಸ್, ಅಮೃತಾ ಶೇರ್-ಗಿಲ್ ಮತ್ತು ನಿಕೋಲಾಯ್ ರೋರಿಚ್ ಸೇರಿದಂತೆ ಒಟ್ಟು 9 ಜನ ಅಮರ ಕಲಾವಿದರ ಅತ್ಯಪೂರ್ವ ಕಲಾಕೃತಿಗಳನ್ನು ಡಿಜಿಟಲೀಕರಣ (Digitisation) ಮಾಡುವ ಮಹತ್ಕಾರ್ಯಕ್ಕೆ ಅವರು ಚಾಲನೆ ನೀಡಿದರು. ತಂತ್ರಜ್ಞಾನದ ಮೂಲಕ ನಮ್ಮ ಕಲೆ ಮತ್ತು ಸಾಂಸ್ಕೃತಿಕ ಆಸ್ತಿಯನ್ನು ಶಾಶ್ವತವಾಗಿ ರಕ್ಷಿಸುವ ಅವರ ಈ ದೂರದೃಷ್ಟಿಯ ಕ್ರಮಗಳು ನಮ್ಮ ಇತಿಹಾಸದಲ್ಲಿ ಎಂದೆಂದಿಗೂ ಮೈಲಿಗಲ್ಲುಗಳಾಗಿವೆ.

ಪುಟ 4 ರಲ್ಲಿ ಮುಂದುವರಿದಿದೆ

# ಇಕೋ ಅಂಗಡಿಯಲ್ಲಿ ಗಮನಸೆಳೆದ ಬಟ್ಟೆಚೀಲಗಳು; ಕಸಿ ಕಟ್ಟುವ ಕಾರ್ಯಾಗಾರದಲ್ಲಿ ಹಸಿರು ಬದುಕಿನ ಪಾಠ



**ಚೇತನ ಸಂಸ್ಥೆಯು ತನ್ನ 'ಇಕೋ ಚೇತನ' ಕಾರ್ಯಕ್ರಮದ ಅಡಿಯಲ್ಲಿ ಆರೋಗ್ಯಕರ ಮತ್ತು ಹಸಿರು ಜೀವನಶೈಲಿಯನ್ನು ಉತ್ತೇಜಿಸುವ ಉದ್ದೇಶದಿಂದ ಪ್ರತಿ ಶನಿವಾರ ಮಧ್ಯಾಹ್ನ 3ರಿಂದ ಸಂಜೆ 7ರವರೆಗೆ ತನ್ನ ಆವರಣದಲ್ಲಿ ಇಕೋ ಕಾರ್ಯಾಗಾರ ಹಾಗೂ ಇಕೋ ಅಂಗಡಿಯನ್ನು ಆಯೋಜಿಸುತ್ತಿದೆ. ಪರಿಸರ ಸ್ನೇಹಿ ಬದುಕಿನ ಸಂದೇಶ ಸಾರುವ ಈ ಕಾರ್ಯಯೋಜನೆ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗುತ್ತಿದೆ.**

ಮೇ 16ರಂದು ನಡೆದ ಕಾರ್ಯಕ್ರಮದಲ್ಲಿ ಸಸ್ಯಗಳಲ್ಲಿ ಕಸಿ ಕಟ್ಟುವ ಕುರಿತು ವಿಶೇಷ ಕಾರ್ಯಾಗಾರ ಮತ್ತು ಇಕೋ ಅಂಗಡಿ ಪ್ರಮುಖ ಆಕರ್ಷಣೆಯಾಗಿದ್ದವು. ಪರಿಸರ ಸಂರಕ್ಷಣೆ, ಸಾವಯವ ಜೀವನಶೈಲಿ ಮತ್ತು ಸುಸ್ಥಿರ ಕೃಷಿಯ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಅನೇಕರು ಭಾಗವಹಿಸಿದರು.

ಈ ಬಾರಿಯ ಇಕೋ ಅಂಗಡಿಯಲ್ಲಿ ವಿವಿಧ ಬಗೆಯ ಮಾವಿನ ಹಣ್ಣುಗಳು, ನೇರಳೆಹಣ್ಣು, ಬೇಲದ ಹಣ್ಣು, ಬಾಳೆಹಣ್ಣು, ವಾಟರ್ ಆಪಲ್, ಕೊಬ್ಬರಿ ಹಾಗೂ ತೆಂಗಿನಕಾಯಿಗಳು ಗಮನ ಸೆಳೆದವು. ಇದರ ಜೊತೆಗೆ ಸಾವಯವ ಒಣದ್ರಾಕ್ಷಿ, ಗೋಡಂಬಿ, ಲವಂಗ, ಕಾಳುಮೆಣಸು, ಏಲಕ್ಕಿ, ಜಾಯಿಕಾಯಿ, ಅಗಸೆ, ನವಣೆ, ಸಾಮೆ, ಸಾಸಿವೆ, ಹೆಸರುಕಾಳು, ತೊಗರಿಬೇಳೆ, ಕಡಲೆಕಾಳು, ಮಡಿಕೆಕಾಳು ಸೇರಿದಂತೆ ಹಲವು ಧಾನ್ಯಗಳು ಮತ್ತು ಗಾಣದ ಎಣ್ಣೆಗಳು, ಜೋನಿ ಬೆಲ್ಲ, ಗಟ್ಟಿ ಬೆಲ್ಲ, ಸಣ್ಣವಳ್ಳ ಕೆಂಪಕ್ಕಿ, ರಾಜಮುಡಿ ಅಕ್ಕಿ ಮುಂತಾದ ಸ್ಥಳೀಯ ಹಾಗೂ ಆರೋಗ್ಯಕರ ಆಹಾರ ಪದಾರ್ಥಗಳು ಮಾರಾಟಕ್ಕೆ ಲಭ್ಯವಿದ್ದವು.

**ಬಟ್ಟೆ ಚೀಲಗಳ ಆಕರ್ಷಣೆ:** ಇಕೋ ಅಂಗಡಿಯ ಮತ್ತೊಂದು ವಿಶೇಷತೆ ಪ್ಲಾಸ್ಟಿಕ್‌ರಹಿತ ವ್ಯವಸ್ಥೆ. ಸಾಮಾನ್ಯವಾಗಿ ಆಹಾರಧಾನ್ಯಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಮಾರಾಟ ಮಾಡುವ ಪದ್ಧತಿಗೆ ಪರ್ಯಾಯವಾಗಿ, ಅದಮ್ಯ ಚೇತನ ಸಂಸ್ಥೆಯು ವಿಶೇಷ ಬಟ್ಟೆ ಚೀಲಗಳಲ್ಲಿ ಧಾನ್ಯಗಳನ್ನು ಮುಂಚಿತವಾಗಿ ಪ್ಯಾಕ್ ಮಾಡಿ ಮಾರಾಟಕ್ಕೆ ಇಟ್ಟಿತ್ತು. ಇದು ಸಾರ್ವಜನಿಕರ ಗಮನ ಸೆಳೆಯಿತು.ಪ್ಲಾಸ್ಟಿಕ್‌ನ ಅತಿಯಾದ ಬಳಕೆ ಪರಿಸರ ಮತ್ತು ಮನುಕುಲಕ್ಕೆ ಸವಾಲಾಗಿರುವ ಹಿನ್ನೆಲೆಯಲ್ಲಿ, ಪರಿಸರ ಸ್ನೇಹಿ ಪರ್ಯಾಯಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನವಾಗಿ ಈ ಯೋಜನೆಯನ್ನು ರೂಪಿಸಲಾಗಿದೆ. 100 ಗ್ರಾಂ ಒಣದ್ರಾಕ್ಷಿಗೆ ಪುಟ್ಟ ಚೀಲಗಳಿಂದ ಆರಂಭಿಸಿ, 2 ಕೆಜಿ ತೂಕದವರೆಗಿನ ಬಟ್ಟೆ ಚೀಲಗಳಲ್ಲಿ ಸಾರ್ವಜನಿಕರು ಆಹಾರಧಾನ್ಯಗಳನ್ನು ಖರೀದಿಸಿದರು.

ಕಸಿ ಕಾರ್ಯಾಗಾರದಲ್ಲಿ ಪ್ರಾಯೋಗಿಕ ತರಬೇತಿ ಕಾರ್ಯಾಗಾರದ ಭಾಗವಾಗಿ ಗಿಡಗಳಿಗೆ ಕಸಿ ಕಟ್ಟುವ ಕುರಿತು ತಜ್ಞರಾದ ನಾಗರಾಜ ಭಟ್, ರಾಜೇಂದ್ರ ಹೆಗಡೆ ಹಾಗೂ ಮುನಿಕೃಷ್ಣ ಅವರು ಪ್ರಾತ್ಯಕ್ಷಿಕೆಯೊಂದಿಗೆ ಮಾಹಿತಿ ನೀಡಿದರು. ತೋಟಗಾರಿಕೆ ಸಲಹೆಗಾರರಾದ ನಾಗರಾಜ ಭಟ್, ಸುಸ್ಥಿರ ಕೃಷಿ ಹಾಗೂ ಸಾವಯವ ಉತ್ಪನ್ನಗಳ ಸಾಮಾಜಿಕ ಜಾಗೃತಿ ಕಾರ್ಯಕರ್ತ ರಾಜೇಂದ್ರ ಹೆಗಡೆ ಮತ್ತು ಅಪೂರ್ವ ಕಸಿ ತಜ್ಞರಾದ ಮುನಿಕೃಷ್ಣ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಸಿ ಕಟ್ಟುವ ವಿಧಾನ ಕುರಿತು ವಿವರಿಸಿದ ರಾಜೇಂದ್ರ ಹೆಗಡೆ ಅವರು, ಸಾಮಾನ್ಯವಾಗಿ ಗುಲಾಬಿ, ಮಾವು, ಚಿಕ್ಕು, ದಾಳಿಂಬೆ ಮತ್ತು ಸೀಬೆ ಗಿಡಗಳಿಗೆ ಕಸಿ ಕಟ್ಟಲಾಗುತ್ತದೆ ಎಂದು ಹೇಳಿದರು. ಒಂದು ಮಾವಿನ ಗಿಡಕ್ಕೆ ಬೇರೆ ಬೇರೆ ತಳಿಯ ಮಾವಿನ ಟೊಂಗೆಗಳನ್ನು ಜೋಡಿಸುವ ಮೂಲಕ ಒಂದೇ ಗಿಡದಲ್ಲಿ ಹಲವು ಬಗೆಯ ಹಣ್ಣುಗಳನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು. ಇದೇ ವಿಧಾನವನ್ನು ಬೋಗನ್‌ವಿಲ್ಲಾ ಮತ್ತು ಗುಲಾಬಿ ಗಿಡಗಳಲ್ಲಿಯೂ ಅನುಸರಿಸಬಹುದು ಎಂದರು. ಕಸಿ ವಿಧಾನದಿಂದ ಸಸಿಗಳ ಆಯುಷ್ಯ ಮತ್ತು ಹಣ್ಣಿನ ಗುಣಮಟ್ಟ ಹೆಚ್ಚಾಗುತ್ತದೆ ಎಂಬ ಮಾಹಿತಿಯನ್ನೂ ಹಂಚಿಕೊಂಡರು.

ನಾಗರಾಜ ಭಟ್ ಅವರು ಮಾತನಾಡಿ, ಕಸಿ ಕಟ್ಟುವ ಪ್ರಕ್ರಿಯೆ ಅತ್ಯಂತ ಸೂಕ್ಷ್ಮವಾದದ್ದು ಎಂದು ಹೇಳಿದರು. ವಿಶೇಷವಾಗಿ ಗುಲಾಬಿ ಗಿಡಗಳಲ್ಲಿ ಕಸಿ ಮಾಡುವಾಗ ಎರಡೂ ಗಿಡಗಳ ಕಣ್ಣುಗಳನ್ನು ಜಾಗರೂಕತೆಯಿಂದ ಕತ್ತರಿಸಿ, ಅತಿ ಕಡಿಮೆ ಸಮಯದಲ್ಲಿ ಅವುಗಳನ್ನು ಪ್ಲಾಸ್ಟಿಕ್ ಸ್ಟ್ರಿಪ್‌ನಿಂದ ಜೋಡಿಸಬೇಕು. ವಿಳಂಬವಾದರೆ ಜೀವಾಂಶ ಒಣಗಿ ಹೋಗುವ ಸಾಧ್ಯತೆ ಇರುತ್ತದೆ ಎಂದು ವಿವರಿಸಿದರು. ಪ್ರತಿದಿನ ನೂರಾರು ಗಿಡಗಳಿಗೆ ಯಶಸ್ವಿಯಾಗಿ ಕಸಿ ಕಟ್ಟುವ ಅನುಭವ ಹೊಂದಿರುವ ಮುನಿಕೃಷ್ಣ ಅವರು ಕಾರ್ಯಾಗಾರದಲ್ಲಿ ಭಾಗವಹಿಸಿದವರಿಗೆ ಗುಲಾಬಿ ಗಿಡದ ಕಸಿಯನ್ನು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿ, ಹಲವು ಉಪಯುಕ್ತ ಸಲಹೆಗಳನ್ನು ನೀಡಿದರು.

ಒಟ್ಟಾರೆಯಾಗಿ, ಅದಮ್ಯ ಚೇತನ ಸಂಸ್ಥೆಯ 'ಇಕೋ ಚೇತನ' ಕಾರ್ಯಕ್ರಮವು ಕೇವಲ ಪರಿಸರ ಸ್ನೇಹಿ ವಸ್ತುಗಳ ಮಾರಾಟಕ್ಕಷ್ಟೇ ಸೀಮಿತವಾಗದೆ, ಜನಸಾಮಾನ್ಯರಲ್ಲಿ ಹಸಿರು ಜೀವನಶೈಲಿಯ ಬಗ್ಗೆ ಆಳವಾದ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ. ಬಟ್ಟೆ ಚೀಲಗಳ ಬಳಕೆಯ ಅಭಿಯಾನ ಹಾಗೂ ಕಸಿ ಕಟ್ಟುವಂತಹ ಕೌಶಲ್ಯಗಳ ಪ್ರಾತ್ಯಕ್ಷಿಕೆಯು ನಗರವಾಸಿಗಳಿಗೂ ಪ್ರಕೃತಿಯೊಂದಿಗೆ ಬೆರೆತು ಬದುಕಲು ಉತ್ತಮ ಪ್ರೇರಣೆ ನೀಡಿದೆ. ಮನೆಯಂಗಳದಲ್ಲೇ ಕಸಿ ಮಾಡಿ ಬೆಳೆಸಿದ ಗಿಡಗಳು ಹಾಗೂ ದಿನಸಿ ಖರೀದಿಗೆ ಮರುಬಳಕೆಯ ಬಟ್ಟೆಚೀಲಗಳು ನಮ್ಮ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾದಾಗ ಮಾತ್ರ ಇಂತಹ ಅರ್ಥಪೂರ್ಣ ಕಾರ್ಯಾಗಾರಗಳ ಉದ್ದೇಶ ಸಾರ್ಥಕವಾಗುತ್ತದೆ. ಸುಸ್ಥಿರ ಭವಿಷ್ಯದತ್ತ ಇಟ್ಟಿರುವ ಈ ಹಸಿರು ಹೆಜ್ಜೆಗೆ ನಾವೆಲ್ಲರೂ ಕೈಜೋಡಿಸಬೇಕಿದೆ.



## ಕೆಂಪುಕಾಲಿನ ಚಾಣ (Amur Falcon)

ಕೆಂಪುಕಾಲಿನ ಚಾಣ (Amur Falcon) ಎಂಬುದು ಫಾಲ್ಕನ್ ಜಾತಿಗೆ ಸೇರಿದ, ಬೇಟೆಗಾರ ಹಕ್ಕಿಗಳ ಕುಟುಂಬದ ಒಂದು ಸಣ್ಣ ಗಾತ್ರದ ವಲಸೆ ಹಕ್ಕಿಯಾಗಿದೆ. ಇದರ ವೈಜ್ಞಾನಿಕ ಹೆಸರು Falco amurensis. ಇವು ಮೂಲತಃ ಉತ್ತರ ಚೀನಾ ಹಾಗೂ ದಕ್ಷಿಣ-ಪೂರ್ವ ಸೈಬೀರಿಯಾ ಭಾಗಗಳಲ್ಲಿ ವಂಶಾಭಿವೃದ್ಧಿ ಮಾಡುತ್ತವೆ. ಸಂತಾನೋತ್ಪತ್ತಿಯ ಅವಧಿ ಮುಗಿದ ನಂತರ, ಚಳಿಗಾಲವನ್ನು ಕಳೆಯಲು ಬೃಹತ್ ಗುಂಪುಗಳಲ್ಲಿ ಆಫ್ರಿಕಾದ ದಕ್ಷಿಣ ಹಾಗೂ ಪೂರ್ವ ಕರಾವಳಿ ಪ್ರದೇಶಗಳಿಗೆ ಸುದೀರ್ಘ ವಲಸೆ ಹೊರಡುತ್ತವೆ. ತಮ್ಮ ಈ ದೀರ್ಘ ಪ್ರಯಾಣದ ಹಾದಿಯಲ್ಲಿ ಭಾರತ ಹಾಗೂ ಅರೇಬಿಯನ್ ಸಮುದ್ರದ ಮೇಲೆ ದೊಡ್ಡ ಸಂಖ್ಯೆಯಲ್ಲಿ ಹಾರಾಡುವ ಇವು, ಕರ್ನಾಟಕದ ಭಾಗಗಳಲ್ಲೂ ಕಂಡುಬರುತ್ತವೆ.

ಪಕ್ಷಿಗಳ ವಿಸ್ಮಯ ಜಗತ್ತು

-ಶ್ರೀಧರ್ ತುಮರಿ

# ಅನಂತಯಾನ

## ಕಾಲಿಗೆ ಗಾಲಿ ಕಟ್ಟಿ ಪರಿಷದ್ ಬೆಳೆಸಿದ ಅನಂತಕುಮಾರ್

ತುರ್ತುಪರಿಸ್ಥಿತಿ ಅಂತ್ಯಗೊಂಡ ನಂತರ 1977ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳು ದೇಶದಾದ್ಯಂತ ಮತ್ತೆ ಚೇತರಿಸಿಕೊಳ್ಳತೊಡಗಿದವು. ಅನೇಕ ಕಡೆಗಳಲ್ಲಿ ವಿದ್ಯಾರ್ಥಿಗಳನ್ನು ಸಂಘಟಿಸುವ ಕಾರ್ಯವನ್ನು ಮೊದಲ ಹೆಜ್ಜೆಯಿಂದಲೇ ಆರಂಭಿಸಬೇಕಾದ ಪರಿಸ್ಥಿತಿ ಇತ್ತು. ಈ ಸಂದರ್ಭದಲ್ಲಿ ಹಿರಿಯ ಕಾರ್ಯಕರ್ತರು ದೇಶದಾದ್ಯಂತ ಪ್ರವಾಸ ಮಾಡಿ ಯುವಕರಿಗೆ ಮಾರ್ಗದರ್ಶನ ನೀಡುತ್ತಿದ್ದರು. ಅಂತಹವರಲ್ಲಿ ಪ್ರಮುಖರಾಗಿದ್ದವರು ಪ್ರೊ. ಪಿ. ವಿ. ಕೃಷ್ಣಭಟ್ಟರು. ಅವರ ಹುಬ್ಬಳ್ಳಿಯ ಪ್ರವಾಸಗಳ ಮೂಲಕವೇ ಯುವ ಅನಂತಕುಮಾರರೊಂದಿಗೆ ಆಪ್ತ ಪರಿಚಯ ಬೆಳೆದಿತು.

ಆ ಸಮಯಕ್ಕೆ ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿ ಪರಿಷತ್ತು ಬಲವಾಗಿ ನೆಲೆಗೊಳ್ಳತೊಡಗಿತ್ತು. ಅಚ್ಯುತ ಲಿಮಯೆ, ಅನಂತಕುಮಾರ್, ವಿಷ್ಣುಕಾಂತ ಚಟಪಲ್ಲಿ, ಗುಡ್ಡು ಇನಾಂದಾರ್, ಅನಿಲ್ ಸಹಸ್ರಬುದ್ಧೆ, ವ್ಯಾಸ ದೇಶಪಾಂಡೆ, ಅನಘಾ ಲಿಮಯೆ, ವಾದೀಂದ್ರ ಆಚಾರ್ಯ ಮೊದಲಾದ ಯುವಕರ ತಂಡ ಸಂಘಟನಾ ಕಾರ್ಯದಲ್ಲಿ ಸಂಪೂರ್ಣ ತೊಡಗಿಸಿಕೊಂಡಿತ್ತು.

ಈ ಯುವಕರಲ್ಲಿ ಅನಂತಕುಮಾರ್ ಸ್ವಾಭಾವಿಕವಾಗಿ ವಿಶಿಷ್ಟವಾಗಿ ಎದ್ದು ಕಾಣುತ್ತಿದ್ದರು. ಪ್ರೊ. ಕೃಷ್ಣಭಟ್ಟರ ಅಭಿಪ್ರಾಯದಲ್ಲಿ, ಅನಂತಕುಮಾರರಲ್ಲಿ ಬಾಲ್ಯದಿಂದಲೇ ಅಪಾರ ಚಟುವಟಿಕೆ, ನಾಯಕತ್ವದ ಗುಣ, ಸಂಘಟನಾ ಸಾಮರ್ಥ್ಯ ಮತ್ತು ಸಮಾಜಪರ ಚಿಂತನೆಗಳ ಅಪೂರ್ವ ಸಂಯೋಜನೆ ಇತ್ತು. ವಿದ್ಯಾರ್ಥಿ ಪರಿಷತ್ತು ಆ ಗುಣಗಳಿಗೆ ಸರಿಯಾದ ದಿಕ್ಕು ಮತ್ತು ವೇದಿಕೆಯನ್ನು ಒದಗಿಸಿತು.

ಮುಂದೆ ಹುಬ್ಬಳ್ಳಿಯ ಯುವಕರ ತಂಡಕ್ಕೆ ರಾಷ್ಟ್ರಮಟ್ಟದ ಪರಿಷತ್ ಸಮ್ಮೇಳನವನ್ನು ಆಯೋಜಿಸುವ ಜವಾಬ್ದಾರಿ ನೀಡಲಾಯಿತು. ಇಷ್ಟು ದೊಡ್ಡ ಕಾರ್ಯಕ್ರಮವನ್ನು ಈ ಯುವಕರು ನಿಭಾಯಿಸಬಹುದೇ? ಬೇಕಾದ ಹಣ ಸಂಗ್ರಹಿಸಬಹುದೇ? ಎಂಬ ಸಂದೇಹಗಳು ಸಹಜವಾಗಿಯೇ ಮೂಡಿದ್ದವು. ಆದರೆ ಮಾತುಕತೆ ಮುಂದುವರಿದಂತೆ ಆತ್ಮವಿಶ್ವಾಸ ಹೆಚ್ಚಾಯಿತು. ಕೊನೆಗೆ ಅವರು ಆ ಸವಾಲನ್ನು ಧೈರ್ಯವಾಗಿ ಸ್ವೀಕರಿಸಿ ಸಮ್ಮೇಳನವನ್ನು ಯಶಸ್ವಿಯಾಗಿ ಆಯೋಜಿಸಿದರು. ಆ ಮೂಲಕ ತಮ್ಮ ಸಂಘಟನಾ ಸಾಮರ್ಥ್ಯವನ್ನು ಸಾಬೀತುಪಡಿಸಿದರು.

ಪ್ರೊ. ಕೃಷ್ಣಭಟ್ಟರು ಹುಬ್ಬಳ್ಳಿಗೆ ಬಂದಾಗಲೆಲ್ಲ ಕಾರ್ಯಕರ್ತರ ಮನೆಗಳಲ್ಲಿ ಉಳಿಯುತ್ತಿದ್ದರು. ಅನಂತಕುಮಾರರ ಮೂಲಕ ಅವರ ತಂದೆತಾಯಿಯವರೊಂದಿಗೆ ಸಹ ಆಪ್ತ ಸಂಬಂಧ ಬೆಳೆದಿತ್ತು. ಒಮ್ಮೆ ಅನಂತಕುಮಾರರ ಮನೆಯಲ್ಲಿ ಊಟಮಾಡಿ ಹೊರಡುತ್ತಿದ್ದಾಗ ಗಿರಿಜಾ ಶಾಸ್ತ್ರಿಯವರುಗೇಟಿನವರೆಗೆಬಂದುಕೈಮುಗಿದುಭಾವಪೂರ್ಣವಾಗಿಹೇಳಿದರು:

"ನಮ್ಮ ಮಗ ತುಂಬ ತುಂಟ. ಅವನು ಎಲ್ಲಿ ದಾರಿ ತಪ್ಪಿಬಿಡುತ್ತಾನೋ ಎಂದು ನಾನು ಹೆದರಿಕೊಂಡಿದ್ದೆ. ನೀವು ಅವನನ್ನು ಸರಿಯಾದ ದಾರಿಗೆ ತಂದಿರಿ." ಅದಕ್ಕೆ ಕೃಷ್ಣಭಟ್ಟರು ನಗುತ್ತಲೇ ಉತ್ತರಿಸಿದರು:

"ಇಲ್ಲಮ್ಮ, ಅನಂತಕುಮಾರ್ ದಾರಿ ತಪ್ಪುವ ಪ್ರಶ್ನೆಯೇ ಇಲ್ಲ. ಅವನಿಗೆ ತಂದೆತಾಯಿಗಳಿಂದಲೇ ಉನ್ನತ ಚಿಂತನೆ ರಕ್ತಗತವಾಗಿ ಬಂದಿದೆ. ತುಂಬ ಚಟುವಟಿಕೆಯಿಂದಿರುವ ಮಕ್ಕಳು ತುಂಟತನ ಮಾಡುವುದು ಸಹಜ. ಅದನ್ನು ದೋಷವೆಂದು ಭಾವಿಸುವ ಅಗತ್ಯವಿಲ್ಲ."

ಕೃಷ್ಣಭಟ್ಟರ ಈ ಮಾತುಗಳು ಅನಂತಕುಮಾರರ ವ್ಯಕ್ತಿತ್ವದ ಆಳವನ್ನು ಸ್ಪಷ್ಟಪಡಿಸುತ್ತವೆ. ಹೊರಗೆ ಕಾಣುತ್ತಿದ್ದ ತುಂಟತನ ಮತ್ತು ಅಪಾರ ಚಟುವಟಿಕೆ ವಾಸ್ತವದಲ್ಲಿ ಸೃಜನಾತ್ಮಕವಾಗಿತ್ತು. ಅವರಲ್ಲಿ ವಿನಾಶಕಾರಿ ಪ್ರವೃತ್ತಿ ಎಂದಿಗೂ ಇರಲಿಲ್ಲ. ಬಾಲ್ಯದಿಂದಲೇ ಸಮಾಜ, ದೇಶ ಮತ್ತು ಜೀವನದ ಬಗ್ಗೆ ಗಂಭೀರ ಚಿಂತನೆ ಮಾಡುವ ಗುಣ ಅವರಲ್ಲಿತ್ತು.

ತಂದೆತಾಯಿಗಳಿಂದ ಬಂದ ಸಂಸ್ಕಾರಗಳ ಜೊತೆಗೆ ಹಿರಿಯರ ಮಾರ್ಗದರ್ಶನ ಮತ್ತು ಸಂಘಟನಾ ಜೀವನವು ಅನಂತಕುಮಾರರ ವ್ಯಕ್ತಿತ್ವವನ್ನು ಮತ್ತಷ್ಟು ಗಟ್ಟಿಗೊಳಿಸಿತು ಎಂದು ಕೃಷ್ಣಭಟ್ಟರು ಅಭಿಪ್ರಾಯಪಟ್ಟಿದ್ದರು.



ವಿದ್ಯಾರ್ಥಿಗಳ ನಡುವೆ ಅನಂತಕುಮಾರರ ನಾಯಕತ್ವ ಸಹಜವಾಗಿ ಹೊರಹೊಮ್ಮುತ್ತಿತ್ತು. ಹೋರಾಟಗಳಲ್ಲಿ, ಚಳುವಳಿಗಳಲ್ಲಿ ಯುವಜನರ ಚಪಲತೆಯೂ ಕಾಣುತ್ತಿದ್ದರೂ ಅದರ ಅಂತರಾಳದಲ್ಲಿ ಸಮಾಜಪರತೆ ಮತ್ತು ರಾಷ್ಟ್ರಭಾವನೆ ಗಾಢವಾಗಿಯೇ ಇತ್ತು.

ಮುಂದೆ ವಿದ್ಯಾರ್ಥಿ ಪರಿಷತ್ತಿನ ಕಾರ್ಯದರ್ಶಿಯಾಗಿ ಹಾಗೂ ಪ್ರಾಂತ್ಯ ಸಂಘಟನಾ ಕಾರ್ಯದರ್ಶಿಯಾಗಿ ಕೆಲಸ ಮಾಡುವಾಗಲೂ ಅನಂತಕುಮಾರ್ ನಿರಂತರವಾಗಿ ಕೃಷ್ಣಭಟ್ಟರ ಸಲಹೆ-ಸೂಚನೆಗಳನ್ನು ಪಡೆಯುತ್ತಿದ್ದರು. ನಿರಂತರ ಪ್ರವಾಸಗಳ ನಡುವೆಯೂ ಶಿವಮೊಗ್ಗಕ್ಕೆ ಬಂದು ಗಂಟೆಗಳ ಕಾಲ ಸಂಘಟನಾ ಚರ್ಚೆ ನಡೆಸುತ್ತಿದ್ದರು.




ರಾತ್ರಿ ಊಟವಾದ ತಕ್ಷಣವೇ ಮುಂದಿನ ಪ್ರವಾಸಕ್ಕೆ ಹೊರಡಲು ಸಿದ್ಧರಾಗುತ್ತಿದ್ದರು.

ಅದಾಗ ಕೃಷ್ಣಭಟ್ಟರು:

"ಈ ರಾತ್ರಿ ಎಲ್ಲಿಗೆ ಹೋಗುತ್ತೀಯಪ್ಪಾ? ಇಲ್ಲೇ ಮಲಗಿ ನಾಳೆ ಬೆಳಿಗ್ಗೆ ಹೋಗು," ಎಂದು ತಡೆಯಲು ಯತ್ನಿಸುತ್ತಿದ್ದರು. ಆದರೆ ಅನಂತಕುಮಾರ್ ಕೇಳುತ್ತಿರಲಿಲ್ಲ. "ರಾತ್ರಿ ಪ್ರಯಾಣ ಮಾಡಿದರೆ ಬೆಳಗ್ಗೆ ತಲುಪಿ ಇಡೀ ದಿನ ಕೆಲಸಕ್ಕೆ ಸಿಗುತ್ತದೆ" ಎಂದು ಹೇಳಿ ಹೊರಟುಬಿಡುತ್ತಿದ್ದರು.

ಅವರನ್ನು ನೋಡಿದಾಗಲೇ "ಕಾಲಿಗೆ ಗಾಲಿ ಕಟ್ಟಿಕೊಂಡಂತೆ" ಎಂಬ ನುಡಿಗಟ್ಟು ಹುಟ್ಟಿರಬೇಕು ಎಂದು ಕೃಷ್ಣಭಟ್ಟರು ಹೇಳುತ್ತಿದ್ದರು.

ಪುಟ 4 ರಲ್ಲಿ ಮುಂದುವರಿದಿದೆ

ಪುಟ 1 ರಿಂದ

## ಅನಂತ ಸಂಸ್ಕೃತಿ ಮತ್ತು ಪರಂಪರೆ

ಐತಿಹಾಸಿಕ ತಾಣಗಳ ರಕ್ಷಣೆಯನ್ನು ಕೇವಲ ಸರ್ಕಾರದ ಹೊಣೆಯಾಗಿಸದೆ, ಕಾರ್ಪೊರೇಟ್ ವಲಯವನ್ನೂ ಈ ಕಾರ್ಯದಲ್ಲಿ ಭಾಗಿಯಾಗಿಸಿದ ವಿನೂತನ ಸಹಭಾಗಿತ್ವದ ರೂವಾರಿ ಶ್ರೀ ಅನಂತಕುಮಾರ್. ಇತಿಹಾಸದ ಉಳಿವಿಗಾಗಿ ಖಾಸಗಿ ಸಂಸ್ಥೆಗಳ ಶಕ್ತಿಯನ್ನು ಬಳಸಿಕೊಂಡ ಅವರು, ಅತ್ಯಾಧುನಿಕ ಸಂರಕ್ಷಣೆ ಮತ್ತು ದೈನಂದಿನ ನಿರ್ವಹಣೆಗಾಗಿ ದೇಶದ 34 ಪ್ರಮುಖ ಸ್ಮಾರಕಗಳನ್ನು ಗುರುತಿಸಿದರು. ಇದರ ಪರಿಣಾಮವಾಗಿ, ಟಾಟಾ (Tata), ಐಟಿಡಿಸಿ (ITDC) ಹಾಗೂ ಐಓಸಿಎಲ್ (IOCL) ನಂತಹ ಪ್ರತಿಷ್ಠಿತ ಕೈಗಾರಿಕಾ ದೈತ್ಯರು ಈ ರಾಷ್ಟ್ರೀಯ ಕಾರ್ಯಕ್ಕೆ ಸ್ವಯಂಪ್ರೇರಿತವಾಗಿ ಕೈಜೋಡಿಸಿದರು. ಭವ್ಯ ಪರಂಪರೆಯನ್ನು ಮುಂದಿನ ಪೀಳಿಗೆಗೆ ಸುರಕ್ಷಿತವಾಗಿ ದಾಟಿಸುವ ಈ ದೂರದೃಷ್ಟಿಯ ಹೆಜ್ಜೆಯೇ ನಿಜವಾದ ಸಂಸ್ಕೃತಿ ಸಂರಕ್ಷಣೆ. ಈ ದಾರ್ಶನಿಕ ನಿಲುವು, ಅಪ್ರತಿಮ ನಾಯಕನೊಬ್ಬನ ನಿಜವಾದ ಸಾಂಸ್ಕೃತಿಕ ಬದ್ಧತೆಗೆ ಕೈಗನ್ನಡಿಯಾಗಿದೆ.





ವಿಶ್ವ ಪಾರಂಪರಿಕ ದಿನವನ್ನು ಆಚರಿಸುತ್ತಿರುವ ಈ ಹೊತ್ತಿನಲ್ಲಿ, ತಾಯ್ನಾಡಿಗೆ ಮರಳಿದ ಚೋಳರ ಶಾಸನಗಳು, ಡಿಜಿಟಲ್ ಸ್ಪರ್ಶ ಪಡೆದ ಅಮರ ಕಲಾವಿದರ ಕಲಾಕೃತಿಗಳು ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಮರುಜೀವ ಪಡೆದ ಸ್ಮಾರಕಗಳು ನಮಗೆ ಹೊಸ ಜವಾಬ್ದಾರಿಯನ್ನು ನೆನಪಿಸುತ್ತವೆ. ಶ್ರೀ ಅನಂತಕುಮಾರ್ ಅವರು ಸಾಂಸ್ಕೃತಿಕ ರಕ್ಷಣೆಗಾಗಿ ಹಾಕಿಕೊಟ್ಟ ಈ ಭದ್ರ ಬುನಾದಿಯನ್ನು ಕೇವಲ ಪುಸ್ತಕಗಳಲ್ಲಿ ಓದಿ ಸಂಭ್ರಮಿಸಿದರೆ ಸಾಲದು; ಬದಲಾಗಿ, ಇಂದಿನ ಯುವಜನತೆಯಲ್ಲಿ ನಮ್ಮ ಮಣ್ಣಿನ ಇತಿಹಾಸ, ಸ್ಥಳೀಯ ಕಲೆಗಳು ಮತ್ತು ಹಸ್ತಪ್ರತಿಗಳ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವುದು ಇಂದಿನ ತುರ್ತು. ನಮ್ಮ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಯಾಗಿರಿಸಿಕೊಂಡು, ಆಧುನಿಕ ತಂತ್ರಜ್ಞಾನವನ್ನು ಮೈಗೂಡಿಸಿಕೊಳ್ಳುವುದೇ ನೈಜ ಪ್ರಗತಿ. ದೇಶದ ಪ್ರತಿಯೊಬ್ಬ ಯುವಕನೂ ಭವ್ಯ ಪರಂಪರೆಯ ರಾಯಭಾರಿಯಾಗಬೇಕು ಎಂಬ ಶ್ರೀ ಅನಂತಕುಮಾರ್ ಅವರ ಆಶಯವನ್ನು ಸಾಕಾರಗೊಳಿಸಲು ನಾವೆಲ್ಲರೂ ಒಂದಾಗಿ ಸಂಕಲ್ಪ ಮಾಡೋಣ.

ಪುಟ 3 ರಿಂದ

## ಕಾಲಿಗೆ ಗಾಲಿ ಕಟ್ಟಿ ಪರಿಷದ್ ಬೆಳೆಸಿದ ಅನಂತಕುಮಾರ್

ಅನಂತಕುಮಾರರ ಮತ್ತೊಂದು ಅಪೂರ್ವ ಗುಣವೆಂದರೆ ಅವರ ಅದ್ಭುತ ಸ್ಮರಣಶಕ್ತಿ. ಯಾವ ಊರಿನ ಯಾವ ಕಾರ್ಯಕರ್ತನನ್ನಾದರೂ ಹೆಸರು ಹಿಡಿದು ಕರೆಯುವುದಷ್ಟೇ ಅಲ್ಲ, ಅವರ ಕುಟುಂಬ, ಹಿನ್ನೆಲೆ, ಕೆಲಸ, ಸಂಪರ್ಕ — ಎಲ್ಲವನ್ನೂ ನೆನಪಿಟ್ಟುಕೊಂಡು ಮಾತನಾಡುವ ಸಾಮರ್ಥ್ಯ ಅವರಿಗಿತ್ತು. ಇಂತಹ ಸ್ಮರಣಶಕ್ತಿ ಹೊಂದಿದ ವ್ಯಕ್ತಿಯನ್ನು ತಾನು ವಿರಳವಾಗಿ ಮಾತ್ರ ಕಂಡಿದ್ದೇನೆ ಎಂದು ಕೃಷ್ಣಭಟ್ಟರು ಹೇಳುತ್ತಿದ್ದರು.

ನಿರಂತರ ಪ್ರವಾಸದ ನಡುವೆಯೂ ಅಧ್ಯಯನಶೀಲತೆಯನ್ನು ಬೆಳೆಸಿಕೊಂಡಿದ್ದದ್ದು ಅನಂತಕುಮಾರರ ಮತ್ತೊಂದು ವಿಶೇಷ. ಯಾವುದೇ ವಿಷಯವನ್ನು ಆಳವಾಗಿ ಅಧ್ಯಯನ ಮಾಡುವುದು, ಮಾಹಿತಿ ಸಂಗ್ರಹಿಸುವುದು, ವಿಶ್ಲೇಷಿಸುವುದು — ಇವೆಲ್ಲ ಅವರ ಸ್ವಭಾವದ ಭಾಗವಾಗಿತ್ತು.

ಆದರೆ ಅವರು ಒಬ್ಬರೇ ಕೆಲಸಮಾಡುವ ವ್ಯಕ್ತಿಯಲ್ಲ. ಎಲ್ಲರನ್ನು ಜೊತೆಗೈದು, ಸಂಘಟಿಸಿ, ಒಟ್ಟಾಗಿ ಶಕ್ತಿಯನ್ನಾಗಿ ರೂಪಿಸಿ ಮುನ್ನಡೆಯುವ ಗುಣ ಅವರಲ್ಲಿತ್ತು.

ಅಷ್ಟೇ ಅಲ್ಲದೆ, ರಾಷ್ಟ್ರದ ಬಗ್ಗೆ ವಿಶಾಲ ದೃಷ್ಟಿಕೋನ ಹೊಂದಿದ್ದ ಅನಂತಕುಮಾರರಲ್ಲಿ ಜೀವನದ ಸಣ್ಣಸಣ್ಣ ಕ್ಷಣಗಳನ್ನು ಉಲ್ಲಾಸದಿಂದ ನೋಡುವ ತುಂಟತನವೂ ಇತ್ತು. ಬೈಠಕ್‌ಗಳಲ್ಲಿ ಸ್ನೇಹಿತರನ್ನು ಕೀಟಲೆ ಮಾಡುವುದು, ಚುಟುಕು ಬರೆಯುವುದು, "ಹೋತಾನಂದ" ಎಂಬ ಹೆಸರಿನಲ್ಲಿ ಹಾಸ್ಯಕವಿತೆಗಳನ್ನು ಬರೆಯುವುದು ಅವರ ಹವ್ಯಾಸಗಳಲ್ಲಿ ಸೇರಿತ್ತು.

ಪ್ರೊ. ಕೃಷ್ಣಭಟ್ಟರ ಅಭಿಪ್ರಾಯದಲ್ಲಿ, ಸಂಪರ್ಕ ಕೌಶಲ್ಯ, ಸಂಘಟನಾ ಸಾಮರ್ಥ್ಯ, ಸ್ನೇಹಪರತೆ, ಧ್ಯೇಯನಿಷ್ಠೆ ಮತ್ತು ರಾಷ್ಟ್ರದ ಬಗ್ಗೆ ವಿಶಾಲ ಚಿಂತನೆ — ಇವೆಲ್ಲ ಗುಣಗಳು ಅನಂತಕುಮಾರರಲ್ಲಿ ವಿಕಾಸಗೊಳ್ಳಲು ವಿದ್ಯಾರ್ಥಿ ಪರಿಷತ್ತು ಮಹತ್ವದ ವೇದಿಕೆಯಾಗಿತ್ತು.

## ಟೆರ್ರಾನೋವಾದಿಂದ ಇ-ತ್ಯಾಜ್ಯ ಸಂಗ್ರಹಕ್ಕೆ ಬಾಕ್ಸ್




ಟೆರ್ರಾನೋವಾದ ಇಕೋ ಮ್ಯಾನೇಜ್‌ಮೆಂಟ್ ಸಂಸ್ಥೆಯು ಇ-ತ್ಯಾಜ್ಯ ಸಂಗ್ರಹ ಮತ್ತು ಮರುಬಳಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಉಚಿತ ಸಂಗ್ರಹ ಬಾಕ್ಸ್‌ಗಳನ್ನು ಒದಗಿಸುತ್ತಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಗುಹಾ ಜಯರಾಮ್ ಹೇಳಿದರು. ಅದಮ್ಯ ಚೇತನದ ಇಕೋ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಇ-ತ್ಯಾಜ್ಯಗಳನ್ನು ಸಾಮಾನ್ಯ ಕಸದೊಂದಿಗೆ ವಿಲೇವಾರಿ ಮಾಡುವುದು ಭೂಮಿ ಮತ್ತು ಪರಿಸರಕ್ಕೆ ಹಾನಿಕಾರಕವಾಗಿದ್ದು, ಅವುಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಸೂಕ್ತವಾಗಿ ಮರುಬಳಕೆ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಅದಮ್ಯ ಚೇತನಕ್ಕೆ ಎರಡು ಇ-ತ್ಯಾಜ್ಯ ಸಂಗ್ರಹ ಬಾಕ್ಸ್‌ಗಳನ್ನು ಕೊಡುಗೆಯಾಗಿ ನೀಡಲಾಯಿತು. ಡಾ. ತೇಜಸ್ವಿನಿ ಅನಂತಕುಮಾರ ಅವರು ಸಾರ್ವಜನಿಕರು ಇ-ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕರೆ ನೀಡಿದರು.

# ಅನಂತ್ ಕುಮಾರ್ – ಒಂದು ಯುಗ, ಒಂದು ದೃಷ್ಟಿ , ಒಂದು ಪ್ರೇರಣೆ

ನಾನು ಕಂಡಂತೆ



ಅನಂತಕುಮಾರ್

ಭಾರತೀಯ ರಾಷ್ಟ್ರಚಿಂತನೆಯ ಆಳವನ್ನು ಗ್ರಹಿಸಿ, ಅದನ್ನು ಜನಸಾಮಾನ್ಯರ ಬದುಕಿನಲ್ಲಿ ಸಾಕಾರಗೊಳಿಸಿದ ಹೆಮ್ಮೆಯ ಪರಂಪರೆ ರಾಷ್ಟ್ರೀಯ ಸ್ವಯಂಸೇವಕ ಸಂಘದ್ದು. ಅದೇ ಚಿಂತನೆಯನ್ನು ದೇಶದ ಪ್ರಧಾನ ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಿದ ಹೆಗ್ಗಳಿಕೆ ಭಾರತೀಯ ಜನತಾ ಪಾರ್ಟಿಯದ್ದು. ಈ ಭವ್ಯ ಪರಂಪರೆಯಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ ಧೀಮಂತ ನಾಯಕ ಅನಂತಕುಮಾರ್. ಅವರ ನಾಯಕತ್ವವು ಕೇವಲ ರಾಜಕೀಯ ಇತಿಹಾಸದ ಒಂದು ಅಧ್ಯಾಯವಲ್ಲ; ಬದಲಿಗೆ ಅದೊಂದು ಸ್ಪಷ್ಟ ದಿಕ್ಸೂಚಿ, ದೂರದೃಷ್ಟಿ ಮತ್ತು ಜೀವಂತ ಸತ್‌ಚಿಂತನೆ.

ಅವರೊಂದಿಗೆ ನೇರ ಒಡನಾಡಿಯಾಗಿ ಕಾರ್ಯನಿರ್ವಹಿಸಿದ ಕೃಷ್ಣ ಜವರಯ್ಯ ಎಂಬ ಸಾಮಾನ್ಯ ಕಾರ್ಯಕರ್ತನಾಗಿ ನನ್ನ ಅನುಭವದ ಮಾತುಗಳಿವು; ಅನಂತಕುಮಾರ್ ಅವರು ನಮಗೆ ಕೇವಲ ಒಬ್ಬ ನಾಯಕರಾಗಿರಲಿಲ್ಲ, ಬದಲಿಗೆ ನಮ್ಮ ಬದುಕಿನ ಮಾರ್ಗದರ್ಶಿ, ಆತ್ಮವಿಶ್ವಾಸದ ಚೇತನ ಮತ್ತು ಸಂಘಟನಾ ಶಕ್ತಿಯ ಜೀವಂತ ಪ್ರತೀಕವಾಗಿದ್ದರು. ರಾಜಕೀಯ ರಂಗದಲ್ಲಿ ಹಲವರು ಅಧಿಕಾರ ಹಾಗೂ ಹುದ್ದೆಗಳಿಂದ ದೊಡ್ಡವರಾಗುತ್ತಾರೆ; ಆದರೆ ಅನಂತಕುಮಾರ್ ಅವರು ತಮ್ಮ ವಿಶಾಲ ಹೃದಯವಂತಿಕೆಯಿಂದ ಸದಾ ಎತ್ತರದಲ್ಲಿ ನಿಲ್ಲುತ್ತಿದ್ದರು. ಅವರ ವ್ಯಕ್ತಿತ್ವದಲ್ಲಿದ್ದ ಸರಳತೆ, ಸೌಮ್ಯತೆ ಮತ್ತು ಸದಾ ಜಾಗೃತವಾಗಿದ್ದ ಗಾಂಭೀರ್ಯ—ಈ ತ್ರಿವೇಣಿ ಸಂಗಮವೇ ಅವರನ್ನು ಒಬ್ಬ ವಿಶಿಷ್ಟ ಜನನಾಯಕನನ್ನಾಗಿ ರೂಪಿಸಿತ್ತು.

ಅವರು ಯಾವಾಗಲೂ ಹೇಳುತ್ತಿದ್ದ ಮೂಲತತ್ವ- ವ್ಯಕ್ತಿ ದೊಡ್ಡವನು ಅಲ್ಲ, ಸಂಘಟನೆ ದೊಡ್ಡದು"-ಅವರ ಜೀವನದ ಸಾರವೇ ಆಗಿತ್ತು. ಸಂಘಟನೆಯನ್ನು ಅವರು ಕೇವಲ ರಾಜಕೀಯ ಸಾಧನವಾಗಿ ನೋಡಲಿಲ್ಲ; ಅದನ್ನು ಜೀವಂತ ಶಕ್ತಿಯಾಗಿ ರೂಪಿಸಿದರು. ಸಂಘಟನೆ ಎಂದರೆ ಕೇವಲ ಜನರ ಗುಂಪಲ್ಲ; ಅದೊಂದು ಕುಟುಂಬ, ಒಂದು ಮೌಲ್ಯ ವ್ಯವಸ್ಥೆ, ಒಂದು ರಾಷ್ಟ್ರನಿರ್ಮಾಣದ ಯಂತ್ರ ಎಂದು ಅವರು ನಮಗೆ ಕಲಿಸಿಕೊಟ್ಟರು.

ಅನಂತಕುಮಾರ್ ಅವರು ಪ್ರತಿಪಾದಿಸುತ್ತಿದ್ದ 'ಸಂಘಟನೆಯ ಗಣಿತ' ಕಾರ್ಯಕರ್ತರ ಬದುಕಿಗೆ ದಾರಿ ದೀಪ. ಆ ಗಣಿತದ ಸೂತ್ರಗಳು ಹೀಗಿದ್ದವು: ಸಂಕಲನ (Addition), ಗುಣಾಕಾರ (Multiplication), ಭಾಗಾಕಾರ (Division) ಮತ್ತು ವ್ಯವಕಲನ (Subtraction) ಕಾರ್ಯಕರ್ತರ ಸಾರ್ವಜನಿಕ ಬದುಕಿಗೆ ದಿಕ್ಸೂಚಿಗಳಾಗಿದ್ದವು. ಅವರ ದೃಷ್ಟಿಯಲ್ಲಿ 'ಸಂಕಲನ' (Addition) ಎಂದರೆ ಕೇವಲ ಹೊಸ ಕಾರ್ಯಕರ್ತರನ್ನು ಸೇರಿಸಿಕೊಳ್ಳುವುದಷ್ಟೇ ಆಗಿರಲಿಲ್ಲ; ಬದಲಿಗೆ "ಸಂಖ್ಯೆಗಿಂತ ಮನಸ್ಸು ಮುಖ್ಯ" ಎನ್ನುತ್ತಾ ಹೃದಯಗಳನ್ನು ಜೋಡಿಸುವುದಾಗಿತ್ತು. 'ಗುಣಾಕಾರ' (Multiplication) ಎಂದರೆ ಒಬ್ಬ ಕಾರ್ಯಕರ್ತನಿಂದ ಮತ್ತೊಬ್ಬರನ್ನು ಬೆಳೆಸುತ್ತಾ ನಾಯಕತ್ವದ ಜವಾಬ್ದಾರಿಯನ್ನು ವಿಸ್ತರಿಸುವುದು. 'ಭಾಗಾಕಾರ' (Division) ಎಂದರೆ ಸವಾಲು ಹಾಗೂ ಸಮಸ್ಯೆಗಳನ್ನು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿ, ಸುಲಭವಾಗಿ ಬಗೆಹರಿಸುವುದು. ಇನ್ನು 'ವ್ಯವಕಲನ' (Subtraction) ಎಂದರೆ ವೈಯಕ್ತಿಕ ಅಹಂಕಾರ ಮತ್ತು ಭಿನ್ನಾಭಿಪ್ರಾಯಗಳನ್ನು ಮೈನಸ್ ಮಾಡಿ (ಕಳೆದು), ಸಂಘಟನೆಯಲ್ಲಿ ಏಕತೆಯನ್ನು ಕಾಪಾಡುವುದು.





ಅವರು ಕಾರ್ಯಕರ್ತರನ್ನು ಕೇವಲ ಕೆಲಸ ಮಾಡುವ ಕೈಗಳನ್ನಾಗಿ ನೋಡಲಿಲ್ಲ; ಬದಲಿಗೆ ಭವಿಷ್ಯದ ನಾಯಕರನ್ನಾಗಿ ರೂಪಿಸಿದರು. ಸಣ್ಣ ಸಣ್ಣ ಜವಾಬ್ದಾರಿಗಳನ್ನು ಹೆಗಲಿಗೇರಿಸುತ್ತಾ, ವೇದಿಕೆಗಳಲ್ಲಿ ಮಾತನಾಡಲು ಅವಕಾಶ ಕಲ್ಪಿಸುತ್ತಾ, ನಮ್ಮಲ್ಲಿ ಆತ್ಮವಿಶ್ವಾಸದ ಬೀಜ ಬಿತ್ತಿ ನೂರಾರು ನಾಯಕರನ್ನು ಸೃಷ್ಟಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ನಾನು ಸಹ ಅವರಿಂದಲೇ ಈ ಬದುಕಿನ ಮಾರ್ಗದರ್ಶನವನ್ನು ಪಡೆದ ಧನ್ಯ ಕಾರ್ಯಕರ್ತ. ಕೇವಲ ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿದ್ದ ನನ್ನಲ್ಲಿನ ಸುಪ್ತ ಸಾಮರ್ಥ್ಯವನ್ನು ಗುರುತಿಸಿ, ಹಂತಹಂತವಾಗಿ ವಿವಿಧ ಜವಾಬ್ದಾರಿಗಳನ್ನು ನೀಡಿ ಅವರು ನನ್ನನ್ನು ಬೆಳೆಸಿದರು. ನನ್ನ ಮೇಲಿದ್ದ ಅವರ ಈ ಅಪಾರ ನಂಬಿಕೆಯೇ ಇಂದು ನನ್ನನ್ನು ಈ ಮಟ್ಟಕ್ಕೆ ತಂದು ನಿಲ್ಲಿಸಿದೆ.

ಅವರು ಆರು ಬಾರಿ ಸಂಸದರಾಗಿದ್ದಾಗಲೂ, ಕೇಂದ್ರ ಸಚಿವರಾಗಿ ದೇಶದ ಉನ್ನತ ಅಧಿಕಾರ ನಡೆಸುತ್ತಿದ್ದಾಗಲೂ ತಮ್ಮ ತಳಮಟ್ಟದ ಕಾರ್ಯಕರ್ತರೊಂದಿಗಿನ ಸಂಪರ್ಕವನ್ನು ಎಂದಿಗೂ ಕಳೆದುಕೊಳ್ಳಲಿಲ್ಲ. ಬೆಂಗಳೂರಿನ ಆಧುನಿಕ ಬೆಳವಣಿಗೆಗೆ ಅವರು ನೀಡಿದ ಕೊಡುಗೆಗಳಾದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು 'ನಮ್ಮ ಮೆಟ್ರೋ' ಯೋಜನೆಗಳು ಅವರ ಅಪ್ರತಿಮ ದೂರದೃಷ್ಟಿಗೆ ಸಾಕ್ಷಿಯಾಗಿವೆ. ಆದರೆ, ಇವೆಲ್ಲಕ್ಕಿಂತ ಮಿಗಿಲಾದ ಅವರ ನಿಜವಾದ ಸಾಧನೆ ಎಂದರೆ, ಸಾರ್ವಜನಿಕ ಬದುಕಿನಲ್ಲಿ ಸಾವಿರಾರು ಸಾಮಾನ್ಯ ಕಾರ್ಯಕರ್ತರ ಮನಸ್ಸಿನಲ್ಲಿ ಅಚಲವಾದ ವಿಶ್ವಾಸ ಮತ್ತು ನಂಬಿಕೆಯನ್ನು ಬಿತ್ತಿದ್ದು.

ಅವರು ಇಂದು ನಮ್ಮೊಂದಿಗಿಲ್ಲದಿದ್ದರೂ, ಅವರಲ್ಲಿದ್ದ ಸೌಮ್ಯತೆ, ಅದಮ್ಯ ಧೈರ್ಯ ಮತ್ತು ಸದಾ ಬೆನ್ನಿಗೆ ನಿಲ್ಲುತ್ತಿದ್ದ "ನಾನಿದ್ದೇನೆ" ಎಂಬ ಭರವಸೆಯ ಮಾತುಗಳು ಇಂದಿಗೂ ನಮ್ಮ ಮನಸ್ಸಿನಲ್ಲಿ ಹಸಿರಾಗಿವೆ. ಇಂದಿನ ಯುವ ಪೀಳಿಗೆಗೆ ಅವರ ಜೀವನವೇ ಒಂದು ಸ್ಪಷ್ಟ ಸಂದೇಶ: ನಾಯಕತ್ವ ಎಂದರೆ ಕೇವಲ ಅಧಿಕಾರವಲ್ಲ, ಅದೊಂದು ನಿರಂತರ ಸೇವೆ; ಅದೊಂದು ಅಲಂಕಾರಿಕ ಹುದ್ದೆಯಲ್ಲ, ಬದಲಿಗೆ ಹೊಣೆಗಾರಿಕೆ. "ಕಾರ್ಯಕರ್ತನ ಶಕ್ತಿಯೇ ಪಕ್ಷದ ಶಕ್ತಿ" ಎಂಬ ಅವರ ಅಚಲ ನಂಬಿಕೆಯೇ ಸಂಘಟನೆಯ ನಿಜವಾದ ಬಲವನ್ನು ಪ್ರತಿಬಿಂಬಿಸುತ್ತದೆ.

ಅಂತಿಮವಾಗಿ ಹೇಳುವುದಾದರೆ—ಅನಂತಕುಮಾರ್ ಅವರು ಕೇವಲ ಒಬ್ಬ ವ್ಯಕ್ತಿಯಾಗಿರಲಿಲ್ಲ; ಅವರೊಂದು ಧೀಮಂತ ಚಿಂತನೆ, ಒಂದು ಅದೃಶ್ಯ ಶಕ್ತಿ. ಅವರಂತಹ ಧ್ರುವತಾರೆಗಳು ಭೌತಿಕವಾಗಿ ನಮ್ಮಿಂದ ದೂರವಾಗಬಹುದು, ಆದರೆ ಅವರು ಹಾಕಿಕೊಟ್ಟ ಮಾರ್ಗ, ಬಿಟ್ಟುಹೋದ ಮೌಲ್ಯಗಳು ಮತ್ತು ನೀಡಿದ ಪ್ರೇರಣೆ ಸಾರ್ವಕಾಲಿಕವಾದದ್ದು. ಅವರು ನಮ್ಮ ಸತ್ಚಿಂತನೆಗಳ ಮೂಲಕ ಸದಾ ಜೀವಂತವಾಗಿದ್ದಾರೆ.

**-ಕೃಷ್ಣ ಜವರಯ್ಯ (ಕಿಟ್ಟಿ ),**

**ಮಾಜಿ ರಾಜ್ಯ ಕಾರ್ಯದರ್ಶಿ, ಓಬಿಸಿ ಮೋರ್ಚಾ, ಕರ್ನಾಟಕ.**

# ಶಿಬಪುರ ಐಐಇಎಸ್‌ಟಿಯಲ್ಲಿ ವಸ್ತುಸಂಗ್ರಹಾಲಯ ಉದ್ಘಾಟನೆ


Inauguration of the Micromuseum

ಕೋಲ್ಕತ್ತಾದ ಶಿಬಪುರದಲ್ಲಿರುವ ಭಾರತೀಯ ಇಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯಲ್ಲಿ (ಐಐಇಎಸ್ಟಿ) ಮೇ 18ರಂದು (ಅಂತಾರಾಷ್ಟ್ರೀಯ ಮ್ಯೂಸಿಯಂ ದಿನದ ಅಂಗವಾಗಿ) ನೂತನವಾಗಿ ನಿರ್ಮಿಸಲಾದ ವಸ್ತುಸಂಗ್ರಹಾಲಯ ಉದ್ಘಾಟಿಸಲಾಯಿತು. 170 ವರ್ಷಗಳ ಇತಿಹಾಸ ಹೊಂದಿರುವ ಐಐಇಎಸ್‌ಟಿ (ಹಿಂದಿನ ಬೆಂಗಾಲ್ ಎಂಜಿನಿಯರಿಂಗ್ ಕಾಲೇಜು) ಇದುವರೆಗೆ ಹಳೆಯ ದಾಖಲೆಗಳು, ಅಪರೂಪದ ಮಾಹಿತಿ ಹಾಗೂ ವಿವಿಧ ಐತಿಹಾಸಿಕ ವಸ್ತುಗಳ ಸಂಗ್ರಹಾಗಾರವಾಗಿ ಕಾರ್ಯನಿರ್ವಹಿಸುತ್ತಿತ್ತು. ಇದೀಗ ಅದನ್ನು ಆಧುನಿಕ ಮತ್ತು ವಿಶಿಷ್ಟ ಮಾದರಿಯ ವಸ್ತುಸಂಗ್ರಹಾಲಯವಾಗಿ ರೂಪಿಸಲಾಗಿದೆ.

ಉದ್ಘಾಟನೆ ನೆರವೇರಿಸಿ ಮಾತನಾಡಿದ ಡಾ. ತೇಜಸ್ವಿನಿ ಅನಂತಕುಮಾರ ಅವರು, ದಾಖಲೆಗಳ ಸಂಗ್ರಹಾಗಾರ(ಆರ್ಕೈವ್) . ಕೇವಲ ಹಳೆಯ ದಾಖಲೆಗಳೊಂದಿಗೆ ಪ್ರಾರಂಭವಾಗಿರುವ ಈ ಕೇಂದ್ರ ಈಗ ಪುರಾತನ ಯಂತ್ರ ಗಳನ್ನು- ಛಾಯಾಚಿತ್ರಗಳನ್ನು ತೋರಿಸುವ ಸುಂದರ ಮ್ಯೂಸಿಯಂ ಆಗಿದೆ. ಆದರೆ ಈ ಕೆಲಸ ಮುಂದುವರೆದು ಈ ವಸ್ತು ಸಂಗ್ರಹಾಲಯವು ಪ್ರೇರಣಾ ಕೇಂದ್ರವಾಗಿ ಹೊರಹೊಮ್ಮಬೇಕು. ಇಂಜಿನಿಯರಿಂಗ್ ಕ್ಷೇತ್ರದಲ್ಲಿ ಕಳೆದ ೧೦೦ ವರ್ಷದ ಪ್ರಗತಿ, ಬೆಂಗಾಲ್ ಇಂಜಿನಿಯರಿಂಗ್ ಕಾಲೇಜಿನ ಕೊಡುಗೆ ನಮ್ಮ ವಿದ್ಯಾರ್ಥಿಗಳಿಗೆ ಹೊಸ ಆವಿಷ್ಕಾರಗಳನ್ನು ಮಾಡಲು ಪ್ರೇರಣೆ ನೀಡಲಿ ಎಂದು ಅಧ್ಯಕ್ಷರಾದ ತೇಜಸ್ವಿನಿ ಅನಂತಕುಮಾರ್ ಕರೆ ನೀಡಿದರು.

ಈ ಸಂದರ್ಭದಲ್ಲಿ ಅವರು ದಿ ಶ್ರೀ ಅನಂತಕುಮಾರ್ ಅವರ ಅವರ ವ್ಯಕ್ತಿತ್ವ ನೇತೃತ್ವ ಮತ್ತು ಅಭಿವೃದ್ಧಿ ಯೋಜನೆಗಳು - ಸಾಮಾಜಿಕ ಸೇವಾ ಕಾರ್ಯಗಳನ್ನು ಜನರಿಗೆ ಪರಿಚಯಿಸುವ ಉದ್ದೇಶದಿಂದ ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ 'ಅನಂತ ಪ್ರೇರಣಾ ಕೇಂದ್ರ'ಗಳನ್ನು ಸ್ಥಾಪಿಸಲಾಗಿದೆ. ಅಲ್ಲಿ ಚಿತ್ರಗಳು ಮತ್ತು ದೃಶ್ಯ ಮಾಧ್ಯಮಗಳ ಮೂಲಕ ಅವರ ಕಾರ್ಯಗಳನ್ನು ಪರಿಚಯಿಸಲಾಗುತ್ತಿದೆ ಎಂದು ತಿಳಿಸಿದರು.



**ನವೀಕೃತ ಜಾಲತಾಣಕ್ಕೆ ಚಾಲನೆ:** ಐಐಇಎಸ್‌ಟಿ ಸಂಸ್ಥೆಯ ನೂತನ ಜಾಲತಾಣಕ್ಕೆ ಡಾ. ತೇಜಸ್ವಿನಿ ಅನಂತಕುಮಾರ ಅವರು ಮೇ 19ರಂದು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಜಾಲತಾಣವು ಸಂಸ್ಥೆಯ ಜಾಗತಿಕ ಪರಿಚಯದ ಮುಖವಾಗಿದ್ದು, ಸಂಸ್ಥೆಯ ಚಟುವಟಿಕೆಗಳು, ಅವಕಾಶಗಳು ಮತ್ತು ಸಾಧನೆಗಳನ್ನು ವಿಶ್ವದ ಮೂಲೆಮೂಲೆಗೂ ತಲುಪಿಸುವ ಪ್ರಮುಖ ಮಾಧ್ಯಮವಾಗಿದೆ. ಆದ್ದರಿಂದ ಕಾಲಾನುಸಾರವಾಗಿ ಜಾಲತಾಣವೂ ನವೀಕರಣಗೊಳ್ಳುವುದು ಅತ್ಯಗತ್ಯ ಎಂದು ತಿಳಿಸಿದರು.



**ಬಾಸ್ಕೆಟ್‌ಬಾಲ್ ಕ್ರೀಡಾಂಗಣ ಲೋಕಾರ್ಪಣೆ:** ಸಂಸ್ಥೆಯ ೨೦೦೦ನೇ ಸಾಲಿನ ಹಳೆಯ ವಿದ್ಯಾರ್ಥಿಗಳ ಪೂರ್ಣ ಧನಸಹಾಯದೊಂದಿಗೆ ನಿರ್ಮಿಸಲಾದ ನೂತನ ಬಾಸ್ಕೆಟ್‌ಬಾಲ್ ಕ್ರೀಡಾಂಗಣವನ್ನು ಇದೇ ವೇಳೆ ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "2000ನೇ ಇಸವಿಯ ಕಾಲಘಟ್ಟ ವಿಶೇಷ ಮತ್ತು ಸೂಕ್ಷ್ಮವಾಗಿತ್ತು. ವರ್ಷ ೨೦೦೦ ರ ವೈ2ಕೆ ಸಮಸ್ಯೆಯಿಂದಾಗಿ ವಿಶ್ವದಾದ್ಯಂತ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ತಂತ್ರಾಂಶ ವ್ಯವಸ್ಥೆಗಳು ವಿಫಲಗೊಂಡು ವಿಮಾನ ಸಂಚಾರ ಸೇರಿದಂತೆ ಅನೇಕ ಸೇವೆಗಳು ಸ್ಥಗಿತಗೊಳ್ಳಬಹುದು ಎಂಬ ಭೀತಿ ಉಂಟಾಗಿತ್ತು. ಅಂತಹ ಕಾಲಘಟ್ಟದ ವಿದ್ಯಾರ್ಥಿಗಳು ಇಂದು ಹೆಚ್ಚಿದ ಮೊಬೈಲ್ ಬಳಕೆ ಮತ್ತು ಅದರಿಂದಾಗುವ ಅನಾಹುತಗಳಿಂದ ಶಿಕ್ಷಣ ವ್ಯವಸ್ಥೆ ತತ್ತರಿಸಿ ಹೋಗುವ ಸಂದರ್ಭದಲ್ಲಿ ತಾವು ಕಲಿತ ಸಂಸ್ಥೆಗೆ ಕೊಡುಗೆಯಾಗಿ ಬಾಸ್ಕೆಟ್‌ಬಾಲ್ ಕ್ರೀಡಾಂಗಣ ನಿರ್ಮಿಸಿರುವುದು ಶ್ಲಾಘನೀಯ," ಎಂದು ಹೇಳಿದರು.

"ಇಂದಿನ ವಿದ್ಯಾರ್ಥಿಗಳು ಬಳಕೆಯಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ದೈಹಿಕ ಚಟುವಟಿಕೆ ಕಡಿಮೆಯಾಗುತ್ತಿದೆ. ಜೊತೆಗೆ ಜೀವನದ ಗುರಿಗಳ ಕುರಿತು ಸ್ಪಷ್ಟತೆಯೂ ಕುಂಠಿತವಾಗುತ್ತಿದೆ. ಬಾಸ್ಕೆಟ್‌ಬಾಲ್ ಕ್ರೀಡೆಯ ಮೂಲಕ ವಿದ್ಯಾರ್ಥಿಗಳು ದೈಹಿಕ ಚಟುವಟಿಕೆಯಲ್ಲಿ ತೊಡಗಿ ಗುರಿಸಾಧನೆಯ ಮನೋಭಾವ ಬೆಳೆಸಿಕೊಳ್ಳಬಹುದು ಮತ್ತು ಸೋಲನ್ನು ಎದುರಿಸಿ ಮುಂದಿನ ಗೆಲುವಿಗೆ ಸೋಪಾನ ಮಾಡಿಕೊಳ್ಳುವದನ್ನು ಹೇಳಿಕೊಡುತ್ತದೆ ಎಂದರು.

ಮುಂದುವರಿದು, ಇಂದಿನ ಯುವಜನರಲ್ಲಿ ಸಣ್ಣ ವಿಚಾರಗಳಿಗೂ ನಿರಾಸೆ, ಅಸಹನೆ ಮತ್ತು ಭಾವನಾತ್ಮಕ ಕುಸಿತಗಳು ಹೆಚ್ಚುತ್ತಿರುವುದು ಕಂಡುಬರುತ್ತಿದೆ. ಕ್ರೀಡಾ ಚಟುವಟಿಕೆಗಳು ವ್ಯಕ್ತಿತ್ವ ವಿಕಾಸಕ್ಕೆ, ಮಾನಸಿಕ ದೃಢತೆಗೆ ಮತ್ತು ಸಹಬಾಳ್ವೆ ಮನೋಭಾವ ಬೆಳೆಸಲು ನೆರವಾಗುತ್ತವೆ. ಆದ್ದರಿಂದ ಬಾಸ್ಕೆಟ್‌ಬಾಲ್‌ನಂತಹ ಕ್ರೀಡಾಂಗಣಗಳ ಸಂಖ್ಯೆ ಹೆಚ್ಚಾಗಬೇಕು" ಎಂದು ಅವರು ಆಶಯ ವ್ಯಕ್ತಪಡಿಸಿದರು.




## ತುಳುವರ ಸಂಘದ ಕಾರ್ಯಕ್ರಮದಲ್ಲಿ ಪರಿಸರ ಸ್ನೇಹಿ ಹೆಜ್ಜೆ:

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ತುಳುವರ ಸಂಘದ ಕಾರ್ಯಕ್ರಮದಲ್ಲಿ ಸಾವಿರಾರು ಜನರು 'ಅದಮ್ಯ ಚೇತನ' ಸಂಸ್ಥೆಯ ಮರುಬಳಕೆ ಮಾಡಬಹುದಾದ ತಟ್ಟೆಗಳು, ಲೋಟಗಳು, ಐಸ್‌ಕ್ರೀಮ್ ಬಟ್ಟಲುಗಳು ಹಾಗೂ ಚಮಚಗಳನ್ನು ಬಳಸುವ ಮೂಲಕ ಮಾದರಿಯಾಗಿದ್ದಾರೆ. ಈ ಮೂಲಕ ಕ್ವಿಂಟಾಲ್‌ಗಟ್ಟಲೆ ಕಸವು ಭೂಭರ್ತಿ ಕೇಂದ್ರಕ್ಕೆ (ಲ್ಯಾಂಡ್‌ಫಿಲ್) ಸೇರುವುದನ್ನು ಯಶಸ್ವಿಯಾಗಿ ತಡೆಯಲಾಗಿದೆ. ಈ ಪಾತ್ರೆಗಳನ್ನು ಪಡೆದು ಜವಾಬ್ದಾರಿಯುತವಾಗಿ ನಿರ್ವಹಿಸುವುದು ಒಂದು ಸವಾಲಿನ ಕೆಲಸವೇ ಸರಿ. ಏಕೆಂದರೆ ಸಾವಿರಾರು ಪಾತ್ರೆಗಳನ್ನು ಸ್ವಚ್ಛವಾಗಿಡುವುದು, ಸಮರ್ಪಕವಾಗಿ ವಿತರಿಸುವುದು ಮತ್ತು ಹಿಂತಿರುಗಿಸಿದ ವಸ್ತುಗಳನ್ನು ಮರುಪರಿಶೀಲಿಸುವುದು ಅದಮ್ಯ ಚೇತನ ಸಂಸ್ಥೆಗೆ ಶ್ರಮದಾಯಕ ಕಾರ್ಯವಾಗಿರುತ್ತದೆ. ಆದಾಗ್ಯೂ, 'ಕಸಮುಕ್ತ ಸಮಾಜ' ನಿರ್ಮಾಣದತ್ತ ಸಾಗುತ್ತಿರುವ ಸಂಸ್ಥೆಯ ಮೂಲ ಉದ್ದೇಶವೇ ಈ ಎಲ್ಲಾ ಸವಾಲುಗಳನ್ನು ಮೀರಿ ಸದಾ ಮುನ್ನಡೆಯಲು ನಮಗೆ ಪ್ರೇರಕ ಶಕ್ತಿಯಾಗಿದೆ.

## ನೋಯ್ಡಾದಲ್ಲಿ 38ನೇ ಮತ್ತು ಗ್ರೇಟರ್ ನೋಯ್ಡಾದಲ್ಲಿ 39ನೇ 'ಅನಂತ ಪ್ಲೇಟ್ ಬ್ಯಾಂಕ್' ಲೋಕಾರ್ಪಣೆ




ಭಾರತವನ್ನು ಪರಿಸರ ಸ್ನೇಹಿ ಹಾಗೂ ತ್ಯಾಜ್ಯಮುಕ್ತ ರಾಷ್ಟ್ರವನ್ನಾಗಿ ರೂಪಿಸುವ ನಿಟ್ಟಿನಲ್ಲಿ 'ಅದಮ್ಯ ಚೇತನ' ಸಂಸ್ಥೆಯ ಹೆಮ್ಮೆಯ 'ಅನಂತ ಪ್ಲೇಟ್ ಬ್ಯಾಂಕ್' ಯೋಜನೆ ದೇಶದಾದ್ಯಂತ ಯಶಸ್ವಿಯಾಗಿ ವಿಸ್ತರಿಸುತ್ತಿದೆ. ಒಮ್ಮೆ ಬಳಸಿ ಬಿಸಾಡುವ ಏಕಬಳಕೆಯ (ಸಿಂಗಲ್-ಯೂಸ್) ಪ್ಲಾಸ್ಟಿಕ್ ಹಾಗೂ ಕಾಗದದ ತಟ್ಟೆ, ಲೋಟಗಳ ಬಳಕೆಯನ್ನು ಸಂಪೂರ್ಣವಾಗಿ ನಿಯಂತ್ರಿಸಿ, ಸುಸ್ಥಿರ ಸಮುದಾಯ ಜೀವನಶೈಲಿಯನ್ನು ಉತ್ತೇಜಿಸುವ ಉದ್ದೇಶದಿಂದ ಇತ್ತೀಚೆಗಷ್ಟೇ ದೆಹಲಿಯ 'YSS ಫೌಂಡೇಶನ್' ಸಹಯೋಗದೊಂದಿಗೆ ನೋಯ್ಡಾ ಮತ್ತು ಗ್ರೇಟರ್ ನೋಯ್ಡಾದ ಎರಡು ಪ್ರಮುಖ ಸ್ಥಳಗಳಲ್ಲಿ 38ನೇ ಮತ್ತು 39ನೇ 'ಅನಂತ್ ಪ್ಲೇಟ್ ಬ್ಯಾಂಕ್' ಅನ್ನು ಮೇ 07 ರಂದು ಯಶಸ್ವಿಯಾಗಿ ಲೋಕಾರ್ಪಣೆ ಮಾಡಲಾಯಿತು. ಸಾರ್ವಜನಿಕ ಹಾಗೂ ಸಾಮಾಜಿಕ ಸಮಾರಂಭಗಳಲ್ಲಿ ಮರುಬಳಕೆ ಮಾಡಬಹುದಾದ ಸ್ಟೀಲ್ ತಟ್ಟೆ ಮತ್ತು ಲೋಟಗಳನ್ನು ಉಚಿತವಾಗಿ ಒದಗಿಸುವ ಈ ವಿನೂತನ ಆಂದೋಲನಕ್ಕೆ ಸಾರ್ವಜನಿಕ ವಲಯದಲ್ಲಿ ಭಾರಿ ಶ್ಲಾಘನೆ ವ್ಯಕ್ತವಾಗುತ್ತಿದೆ.

ಗ್ರೇಟರ್ ನೋಯ್ಡಾದ ಸೆಕ್ಟರ್ P3 ರ ಮಾರ್ಕೆಟ್ ಆವರಣದಲ್ಲಿ ಆಯೋಜಿಸಲಾಗಿದ್ದ ಈ ಉದ್ಘಾಟನಾ ಸಮಾರಂಭವನ್ನು ಉತ್ತರ ಪ್ರದೇಶದ ಜೇವರ್ ಕ್ಷೇತ್ರದ ಸ್ಥಳೀಯ ಶಾಸಕರಾದ ಶ್ರೀ ಧೀರೇಂದ್ರ ಸಿಂಗ್ ಅವರು ದೀಪ ಬೆಳಗಿಸುವ ಮೂಲಕ ಅಧಿಕೃತವಾಗಿ ಉದ್ಘಾಟಿಸಿದರು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷರಾದ ಡಾ. ತೇಜಸ್ವಿನಿ ಅನಂತಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಆರ್.ಡಬ್ಲ್ಯೂ.ಎ (RWA) ಅಧ್ಯಕ್ಷರಾದ ಅಮಿತ್ ಭಾಟಿ, ಕು. ವಿಜೇತಾ ಸೇರಿದಂತೆ ಹಲವು ಗಣ್ಯರು ಪ್ರಮುಖ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಸ್ವಯಂಸೇವಕರು ಮತ್ತು ನೂರಾರು ಸ್ಥಳೀಯ ಸಾರ್ವಜನಿಕರು ಸಕ್ರಿಯವಾಗಿ ಪಾಲ್ಗೊಂಡು, ಪರಿಸರ ಕಾಳಜಿಯ ಈ ಮಹತ್ತರ ಅಭಿಯಾನಕ್ಕೆ ಕೈಜೋಡಿಸಿದರು.

**ಶ್ರೀಚೇತನ ಸಭೆ** :ಅದಮ್ಯ ಚೇತನದ ಸಾಪ್ತಾಹಿಕ ವಿಶೇಷ ಕಾರ್ಯಕ್ರಮಗಳಲ್ಲಿ ಒಂದಾದ ಪ್ರತಿ ಮಂಗಳವಾರ ನಡೆಯುವ 'ಶ್ರೀ ಚೇತನ' ಕಾರ್ಯಕ್ರಮ ಮೇ 12ರಂದು ಅಂತರ್ಜಾಲದ ಮೂಲಕ ಜರುಗಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥೆ ಡಾ. ತೇಜಸ್ವಿನಿ ಅನಂತಕುಮಾರ ಅವರು ದಿಕ್ಸೂಚಿ ಭಾಷಣ ಮಾಡಿ, ಏಕಬಳಕೆಯ ಪ್ಲಾಸ್ಟಿಕ್ ತ್ಯಜಿಸಿ ಆರೋಗ್ಯಕರ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದರು.

**ಎಣ್ಣೆಯ ಮಿತವ್ಯಯಕ್ಕೆ ಮೋದಿಜಿ ಕರೆ** : ಅಂತಾರಾಷ್ಟ್ರೀಯ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಸಂಪನ್ಮೂಲಗಳ ಮಿತ ಬಳಕೆ ಅತ್ಯವಶ್ಯಕವಾಗಿದೆ ವಿದೇಶದಿಂದ ಆಮದಾಗುತ್ತಿರುವ ಕಚ್ಚಾ ತೈಲದ ಬಳಕೆ ಕಡಿಮೆಮಾಡಿ ಆರ್ಥಿಕ ವ್ಯವಸ್ಥೆ ಸರಿಗೊಳಿಸಲು ಸಹಕರಿಸಿ ಎಂದು ಶ್ರೀ ನರೇಂದ್ರ ಮೋದಿಜಿ ಹೇಳಿದ್ದನ್ನು ಶ್ರೀ ಚೇತನದ ಸಭೆಯಲ್ಲಿ ಚರ್ಚಿಸಲಾಯಿತು.

## ತಿಂಗಳ ವರದಿ
### ( ಏಪ್ರಿಲ್ -ಮೇ ) 2026)

ಸಾವಯವ ಕೃಷಿಗೆ ಉತ್ತೇಜನ, ಅನಗತ್ಯ ಖರ್ಚುಗಳನ್ನು ಕಡಿಮೆ ಮಾಡುವುದು, ದೇಶೀಯ ಉತ್ಪನ್ನಗಳಿಗೆ ಆದ್ಯತೆ ನೀಡುವುದು ಮುಂತಾದ ಕ್ರಮಗಳು ದೇಶದ ಆರ್ಥಿಕ ಸ್ಥಿರತೆಗೆ ಸಹಕಾರಿಯಾಗಲಿವೆ ಎಂದು ಅವರು ಹೇಳಿದರು. ಅಡುಗೆ ಎಣ್ಣೆ ಸಹ ವಿದೇಶದಿಂದ ಆಮದಾಗುತ್ತಿದೆ ಅದರ ಬಳಕೆ ಕಡಿಮೆ ಮಾಡುವದರಿಂದ ದೇಶ ಸೇವೆ ಮತ್ತು ದೇಹ ಸೇವೆ ಎರಡೂ ಸಾಧ್ಯ ಎಂಬ ಮಾತನ್ನು ಶ್ರೀ ಚೇತನದ ಎಲ್ಲ ಸದಸ್ಯೆಯರೂ ಪ್ರತಿಧ್ವನಿಸಿದರು. ದೇಶ ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಜನತೆಗೆ ತ್ಯಾಗ ಮತ್ತು ಮಿತವ್ಯಯದ ಸಂದೇಶ ನೀಡಿದ್ದನ್ನು ಸ್ಮರಿಸಲಾಯಿತು. ಈ ನಿಟ್ಟಿನಲ್ಲಿ ಅದಮ್ಯ ಚೇತನ ಈಗಾಗಲೇ ಹಲವು ಯೋಜನೆಗಳನ್ನು ಜಾರಿಯಲ್ಲಿ ತಂದಿದೆ. ಶನಿವಾರದ ಇಕೋ ಚೇತನದ ಅಂಗಡಿಯಲ್ಲಿ ಸ್ಥಳೀಯವಾಗಿ ತಯಾರಿಸಿದ ಗಾಣದ ಎಣ್ಣೆ ಮಾರಾಟಕ್ಕೆ ಇದೆ ಎಂದು ತೇಜಸ್ವಿನಿ ಅವರು ತಿಳಿಸಿದರು. ಅದೇ ರೀತಿ ಇಂದು ನಾವು ಮಾಡುವ ಸಣ್ಣ ತ್ಯಾಗಗಳು , ಬದಲಾವಣೆಗಳು ಹಾಗೂ ಮಿತವ್ಯಯದ ಕ್ರಮಗಳು ದೇಶದ ಭದ್ರತೆ ಮತ್ತು ಉಜ್ವಲ ಭವಿಷ್ಯಕ್ಕೆ ಅಡಿಪಾಯವಾಗಲಿವೆ ಎಂದರು.

### "ಸ್ಟ್ರಾ ತ್ಯಜಿಸಿ, ಪರಿಸರ ಉಳಿಸಿ":



ಇತ್ತೀಚೆಗೆ ಕೋಲ್ಕತ್ತಾದ ಬೇಲೂರು ಮಠಕ್ಕೆ ಭೇಟಿ ನೀಡಿದ್ದ ಅದಮ್ಯ ಚೇತನ ಸಂಸ್ಥೆಯ ಮುಖ್ಯಸ್ಥರಾದ ತೇಜಸ್ವಿನಿ ಅನಂತಕುಮಾರ್ ಅವರು, ಅಲ್ಲಿನ ತೀವ್ರ ಬಿಸಿಲಿನ ಬೇಗೆಗೆ ತಂಪಾದ ಎಳನೀರನ್ನು ಕುಡಿಯುವಾಗ 'ಸ್ಟ್ರಾ' (ಪ್ಲಾಸ್ಟಿಕ್ ಕೊಳವೆ) ಬಳಸದೆ ಪರಿಸರ ಕಾಳಜಿ ಮೆರೆದಿದ್ದಾರೆ. ಅಲ್ಲದೆ, ಸಾರ್ವಜನಿಕರೂ ಸಹ ಸ್ಟ್ರಾ ಬಳಸದೆ ನೇರವಾಗಿ ಕುಡಿಯುವುದನ್ನು ರೂಢಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಈ ಹಿಂದೆಯೂ, ಅಂದರೆ ೨೦೧೯ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ತೇಜಸ್ವಿನಿ ಅವರು ಆರಂಭಿಸಿದ್ದ '#NoStrawChallenge' ಅಭಿಯಾನವು ಸಾರ್ವಜನಿಕ ವಲಯದಲ್ಲಿ ಭಾರಿ ಸಂಚಲನ ಮೂಡಿಸಿತ್ತು. ಅಂದು ಡಿ.ವಿ. ಸದಾನಂದಗೌಡರು, ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಹಲವು ಪ್ರಮುಖ ನಾಯಕರು ಹಾಗೂ ಸಾವಿರಾರು ರಾಜಕೀಯ ಕಾರ್ಯಕರ್ತರು ಈ ಅಭಿಯಾನಕ್ಕೆ ಒಗ್ಗೂಡಿ, ಸ್ಟ್ರಾ ಬಳಕೆಯನ್ನು ಕೈಬಿಟ್ಟಿದ್ದರು.

"ಎಳನೀರು, ಹಣ್ಣಿನ ರಸ ಅಥವಾ ಯಾವುದೇ ಪೇಯಗಳನ್ನು ಕುಡಿಯುವಾಗ ಏಕಬಳಕೆಯ ಪ್ಲಾಸ್ಟಿಕ್ ಸ್ಟ್ರಾಗಳನ್ನು ಸಂಪೂರ್ಣವಾಗಿ ತ್ಯಜಿಸೋಣ. ಪರಿಸರ ಸಂರಕ್ಷಣೆಯ ಬೃಹತ್ ಆಂದೋಲನದಲ್ಲಿ ನಮ್ಮದೂ ಒಂದು ಪುಟ್ಟ ಹೆಜ್ಜೆಯನ್ನು ಇಡೋಣ" ಎನ್ನುತ್ತಾರೆ ತೇಜಸ್ವಿನಿ ಅನಂತಕುಮಾರ್.

ಅನಂತಪಥ
Published by: Tejaswini Ananthkumar
Inputs : | T S Gopal | Poornaprajna| Trivikram Joshi
ACknowldegements: Nayana S
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರ ಸಂಪುಟ )




ಹುಬ್ಬಳ್ಳಿಯ ಕೆ.ಎಲ್.ಇ ತಾಂತ್ರಿಕ ವಿಶ್ವವಿದ್ಯಾಲಯದ ಔಷಧೀಯ ಸಸ್ಯಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದರು.



ಇತ್ತೀಚೆಗೆ ಶಿಬ್‌ಪುರದ ಭಾರತೀಯ ಇಂಜಿನಿಯರಿಂಗ್ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ (IIEST) ಆಡಳಿತ ಮಂಡಳಿಯ ಅಧ್ಯಕ್ಷರಾದ ಡಾ. ತೇಜಸ್ವಿನಿ ಅನಂತಕುಮಾರ್ ಅವರ ನೇತೃತ್ವದಲ್ಲಿ ಪ್ರಮುಖ ಆಡಳಿತ ಮಂಡಳಿ ಸಭೆ ಜರುಗಿತು.




ಮೇ 7ರಂದು ನೋಯ್ಡಾ-ಗ್ರೇಟರ್ ನೋಯ್ಡಾದಲ್ಲಿ 38 ಹಾಗೂ 39ನೇ 'ಅನಂತ ಪ್ಲೇಟ್ ಬ್ಯಾಂಕ್'ಗೆ ಚಾಲನೆ ಮತ್ತು 'ಸಣ್ಣ ಬದಲಾವಣೆ, ದೊಡ್ಡ ಪರಿಣಾಮ!' ಸಾರುವ 8 ಪರಿಸರ ಜಾಗೃತಿ ಭಿತ್ತಿಪತ್ರಗಳ ಬಿಡುಗಡೆ.








ಅದಮ್ಯ ಚೇತನ ಸಂಸ್ಥೆಯ ವತಿಯಿಂದ 10 ಕೇಂದ್ರಗಳ ಮೂಲಕ ಅಗತ್ಯ ಜನರಿಗೆ ಉಚಿತ ನಿತ್ಯ ಅನ್ನದಾನ ಸೇವೆ ನಿರಂತರವಾಗಿ ನಡೆಯುತ್ತಿದೆ.





ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 539 ರಿಂದ 542ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರಗಿದವು.